**Karnataka**

Posted at: Feb 13 2021 12:53PM

Share

# ಸಿಎಂಆರ್ ವಿವಿಯಿಂದ ವಿದ್ಯಾರ್ಥಿಗಳಿಗೆ ಪರ್ಯಾಯ ವಿವಾದ ಇತ್ಯರ್ಥ ಕೇಂದ್ರ ಪ್ರಾರಂಭ

ಬೆಂಗಳೂರು, ಫೆ 13 [ಯುಎನ್ಐ] ಪರ್ಯಾಯ ವಿವಾದ ಇತ್ಯರ್ಥ ರೂಢಿಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಿಎಂಆರ್ ವಿವಿಯ ಕಾನೂನು ಕೇಂದ್ರದಲ್ಲಿ ಪರ್ಯಾಯ ವಿವಾದ ಇತ್ಯರ್ಥ ಕೇಂದ್ರ [ ಸೆಂಟರ್ ಫಾರ್ ಆಲ್ಟರ್ನೇಟ್ ಡಿಸ್ಪ್ಯೂಟ್ ರೆಸೊಲ್ಯೂಷನ್- ಎಡಿಆರ್ ] ವನ್ನು ತನ್ನ ಬೆಂಗಳೂರಿನ ಕ್ಯಾಂಪಸ್‌ನಲ್ಲಿ ಪ್ರಾರಂಭಿಸಿದೆ. ಎಡಿಆರ್ ಕೇಂದ್ರವು ಯುವ ಕಾನೂನು ವಿದ್ಯಾರ್ಥಿಗಳನ್ನು ಲೋಕ ಅದಾಲತ್, ಮಧ್ಯಸ್ಥಿಕೆ, ಸಂಧಾನ, ರಾಜಿ ಮತ್ತು ಮಧ್ಯಸ್ಥಿಕೆ-ಸಂಧಾನ ಮತ್ತು ಕೌನ್ಸೆಲ್ಲಿಂಗ್ ಸೇವೆಗಳಲ್ಲಿ ತರಬೇತಿ ನೀಡಲಿದೆ.

ಎಡಿಆರ್ ಕೇಂದ್ರವು ಸಿಎಂಆರ್ ಯೂನಿವರ್ಸಿಟಿಯ ಮತ್ತೊಂದು ಪ್ರಯತ್ನವಾಗಿದೆ ಮತ್ತು ಸಿಎಂಆರ್ ಯೂನಿವರ್ಸಿಟಿ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ಸಾಮಾಜಿಕ ಮತ್ತು ಸಮುದಾಯದ ಕಲ್ಯಾಣಕ್ಕೆ ಕೊಡುಗೆ ನೀಡುತ್ತಿದೆ. ಈ ಕೇಂದ್ರವು ಎಡಿಆರ್ ಗಳ ಕುರಿತಾದ ಜ್ಞಾನದ ಸಂಶೋಧನಾ ಕೇಂದ್ರದ ಜತೆಗೆ ವಿವಾದಗಳನ್ನು ಪರಿಹರಿಸುವ ಕೇಂದ್ರವೂ ಆಗಲಿದೆ ಹಾಗೂ ಸಾರ್ವಜನಿಕರಿಗೆ ಸರಳ ಪರ್ಯಾಯಗಳನ್ನು ಒದಗಿಸುತ್ತದೆ.

ಸೆಪ್ಟೆಂಬರ್ 2020ರ ದತ್ತಾಂಶದ ಪ್ರಕಾರ ಈ ರಾಷ್ಟ್ರದಲ್ಲಿ 4 ಕೋಟಿ ಇತ್ಯರ್ಥವಾಗದ ಪ್ರಕರಣಗಳಿವೆ. ನ್ಯಾಯಾಧೀಶರ ಖಾಲಿ ಹುದ್ದೆಗಳು ಪ್ರಕರಣಗಳ ಇತ್ಯರ್ಥಕ್ಕೆ ಪರಿಣಾಮ ಬೀರಿವೆ. 2012ರಲ್ಲಿ ಸರ್ವೋಚ್ಚ ನ್ಯಾಯಾಲಯವು ಪ್ರಕರಣ ನಿರ್ವಹಣೆಯ ಚೌಕಟ್ಟಿಗೆ ಸ್ಕೀಂ ಆಫ್ ನ್ಯಾಷನಲ್ ಕೋರ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಂ ಅನ್ನು ಅನುಮೋದಿಸಿದೆ. ಈ ಯೋಜನೆಯು ಸಾಕ್ಷರತೆ, ತಲಾದಾಯ ಮತ್ತು ಜನಸಂಖ್ಯೆ ಹೆಚ್ಚಳದಿಂದ ಮುಂದಿನ ಮೂರು ದಶಕಗಳಲ್ಲಿ ಪ್ರತಿ ವರ್ಷ ದಾಖಲಾಗುವ ಪ್ರಕರಣಗಳು 15 ಕೋಟಿಗೆ ಹೆಚ್ಚಾಗುವ ಸಾಧ್ಯತೆ ಇದೆ, ಇದರಿಂದ ಕನಿಷ್ಠ 75,000 ನ್ಯಾಯಾಧೀಶರ ಅಗತ್ಯವಿರುತ್ತದೆ. ಆದ್ದರಿಂದ ಪರ್ಯಾಯ ವಿವಾದ ಇತ್ಯರ್ಥ ವಿಧಾನಗಳ ಅಗತ್ಯತೆ ಹೆಚ್ಚಾಗಿದೆ.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶಂಕರ್ ಗಣಪತಿ ಪಂಡಿತ್ ವರ್ಚುಯಲ್ ಕಾರ್ಯಕ್ರಮದಲ್ಲಿ ಎಡಿಆರ್ ಪ್ರಾರಂಭವನ್ನು ಪ್ರಕಟಿಸಿದರು. “ಎಡಿಆರ್ ಕೇಂದ್ರವನ್ನು ಎಡಿಆರ್ ಚಟುವಟಿಕೆಗಳ ವಿದ್ಯಾರ್ಥಿ ಸಮಿತಿಗೆ ವಹಿಸಿರುವುದು ಅತ್ಯುತ್ತಮ ಉಪಕ್ರಮವಾಗಿದೆ. ಈ ಪ್ರಯತ್ನದಲ್ಲಿ ಅವರಿಗೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ” ಎಂದರು.

ಅವರು ಅಬ್ರಹಾಂ ಲಿಂಕನ್ ಅವರ ಮಾತುಗಳನ್ನು ನೆನೆದು, “ಮೊಕದ್ದಮೆಗೆ ನಿರುತ್ಸಾಹ ವಹಿಸಿ, ನಿಮ್ಮ ನೆರೆಹೊರೆಯವರನ್ನು ಎಲ್ಲಿ ಸಾಧ್ಯವೋ ಅಲ್ಲಿ ರಾಜಿಯಾಗಲು ಮನವೊಲಿಸಿ, ಹೆಸರಿಗೆ ಗೆದ್ದವನು ಕೂಡಾ ಶುಲ್ಕ, ವೆಚ್ಚಗಳು ಮತ್ತು ಸಮಯ ವ್ಯರ್ಥವಾಗುವುದರಿಂದ ಸೋಲನ್ನೇ ಪಡೆಯುತ್ತಾರೆ ಎಂದು ಅರಿವು ಮೂಡಿಸಿ. ಶಾಂತಿ ಮೂಡಿಸುವವನಾಗಿ ವಕೀಲನಿಗೆ ಉತ್ತಮ ಮಾನವನಾಗುವ ಮಹತ್ತರ ಅವಕಾಶವಿರುತ್ತದೆ.” ಎಡಿಆರ್ ಮಹತ್ತರ ಬದಲಾವಣೆಗಳನ್ನು ಕಂಡಿದೆ, ಗ್ರಾಮಗಳಲ್ಲಿ ಮರಗಳ ಕೆಳಗಡೆ ಊರ ಹಿರಿಯರು ಕುಳಿತು ವಿವಾದಗಳನ್ನು ಪಂಚಾಯಿತಿಯಲ್ಲಿ ಇತ್ಯರ್ಥಪಡಿಸುತ್ತಿದ್ದ ಕ್ರಮಗಳು ಇದೀಗ ಶಾಸನಬದ್ಧ ಮಾನ್ಯತೆ ಪಡೆಯುವ ಹಂತದಲ್ಲಿದೆ” ಎಂದರು.

ರಾಜ್ಯ ಹೈಕೋರ್ಟ್ ನ ವಿವೃತ್ತ ನ್ಯಾಯಮೂರ್ತಿ ಬೂದಿಹಾಳ್ ಆರ್.ಬಿ., ಕಾನೂನು ವಿದ್ಯಾರ್ಥಿಗಳು ರಾಜಿ ಮಧ್ಯಸ್ಥಿಕೆಗಳಲ್ಲಿ ಪರಿಣಿತಿ ಪಡೆಯುವುದನ್ನು ಉತ್ತೇಜಿಸಿದರು. ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಗಳಾದ ಸುಶೀಲಾ ಸಾರಥಿ, ವಿಶ್ವವಿದ್ಯಾಲಯವು ಈ ಉಪಕ್ರಮದ ಮೂಲಕ ಎಡಿಆರ್ ಮೂಲಕ ಎಲ್ಲ ಕರ್ನಾಟಕದ ವಿಶ್ವವಿದ್ಯಾಲಯಗಳಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತದೆ. ಅವರು ವಿದ್ಯಾರ್ಥಿಗಳಿಗೆ ತಮ್ಮ ಸಂವಹನ, ರಾಜಿಸಂಧಾನ ಮತ್ತಿತರೆ ತಂತ್ರಗಳನ್ನು ಹೆಚ್ಚಿಸಿಕೊಳ್ಳಲು ತರಬೇತಿ ಪಡೆಯಬೇಕು ಎಂದು ಸಲಹೆ ನೀಡಿದರು.

ಯುಎನ್ಐ ವಿಎನ್ 1249

**More News**

## 24 ಗಂಟೆಯಲ್ಲಿ 5 ಕಾಂಗ್ರೆಸ್ ಶಾಸಕರ ರಾಜೀನಾಮೆ ಕೊಡಿಸಬಲ್ಲೆ: ರಮೇಶ ಜಾರಕಿಹೊಳಿ

14 Feb 2021 | 11:46 PM

Share

see more..

## ಆಪ್ತರು,ಕ್ಷೇತ್ರದ ದಾನಿಗಳಿಂದ ಇನ್ನೂ 1ವರ್ಷ ಪ್ರಾಣಿಗಳ ದತ್ತು ಸ್ವೀಕಾರಕ್ಕೆ ಮನವಿ : ಸಚಿವ ಸೋಮಶೇಖರ್

14 Feb 2021 | 11:19 PM

Share

see more..

## ಕೋವಿಡ್ ನಂತರದ ಕಾಲದಲ್ಲಿ ಸ್ಮಾರ್ಟ್ ಕ್ಲಿನಿಕ್,ಡಿಜಿಟಲ್ ಕನ್ಸಲ್‌ಟೇಶನ್‌ಗೆ ವಿಪುಲ ಅವಕಾಶ

**UNI Photo**



CHENNAI, FEB 15 (UNI):-India's R Ashwin in action during the third day of second test match against England at M A Chidambaram Stadium, in Chennai on Monday. UNI PHOTO CH 8 U

**Other Links**

**UNIVARTA (News Agency)**
Indian News Agency

**UNI-Urdu Service(News Agency)**
Indian News Agency

**Newswrap**

**Newswrap1**

14 Feb 2021 | 11:08 PM

Share

see more..

## ಪುಲ್ವಾಮ ದಾಳಿ : ಯುವ ಕಾಂಗ್ರೆಸ್ ಘಟಕದಿಂದ ಶ್ರದ್ಧಾಂಜಲಿ

14 Feb 2021 | 10:56 PM

Share

see more..

## ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಚಿಂತನೆ

14 Feb 2021 | 10:52 PM

Share

see more..



Contact us at :-

United News of India
9, Rafi Marg, New Delhi-110001
Email:vsat@uniindia.com
Contact: 011-23714434 / 23357614 (O)

Copyright @ United News of India. All rights reserved.